ಮೇಲೆ .ಜನರು ಕುಳಿತುಕೊಂಡು ಹೋಗುವಂಥ ವ್ಯವಸ್ಥೆಯನ್ನು ಮುಂದುವರಿಸುವ ಬಗ್ಗೆ ಯೋಚನೆ ಮಾಡಿದ್ದಾರೆಯೇ?

ಶ್ರೀ ಭೀಮಣ್ಣ ಖಂಡ್ರೆ : 9 ಜಿಲ್ಲೆಗಳಲ್ಲಿ ಏನು ನ್ಯಾಷನಲೈಸ್ ರೂಟ್‌ಗಳಿಗೆ ಆ ರೂಟ್‌ಗಳಲ್ಲಿ ನಮ್ಮ ಬಸ್ಸುಗಳನ್ನು ಪ್ರೊವೈಡ್ ಮಾಡಿದ್ದೇವೆ ಎಲ್ಲಿ ಇಲ್ಲಾ ಅಲ್ಲಿಯೂ ಪ್ರೊವೈಡ್ ಮಾಡುತ್ತೇವೆ ಬೇರೆಯವರಿಗೆ ಕೊಟ್ಟು ಅನುಕೂಲ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ ಆದರೆ ಎಷ್ಟು ಸೌಲಭ್ಯ ಕೊಡಬಹುದೋ ಅಷ್ಟು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಆರ್.ಎನ್. ನಾಯಕ್ : ರನ್ನಿಂಗ್ ರೂಟ್ಸ್‌ಗಳನ್ನು ಸ್ಯಾಪ್ ಮಾಡಿದ್ದೀರಿ. ರಾಷ್ಟ್ರೀಕರಣ ಮಾಡುವುದನ್ನು ತೆಗೆದುಹಾಕಿ ಪ್ರೈವೇಟ್‌ನವರಿಗೆ ಕೊಡಿ.

ಶ್ರೀ ಭೀಮಣ್ಣ ಖಂಡ್ರೆ : 9 ಜಿಲ್ಲೆಗಳಲ್ಲಿ ನ್ಯಾಷನಲೈಸ್ ಆಗಿದೆ ಅಲ್ಲಿ ಪ್ರೈವೇಟ್‌ನವರಿಗೆ ಬಸ್ಸುಗಳನ್ನು ಕೊಡುವ ಪ್ರಶ್ನೆ ಇಲ್ಲ ಎಲ್ಲಿ ಪಾರ್ಶಿಯಲ್ ಇದೆ ಅಲ್ಲಿ ನಮ್ಮ ಬಸ್ಸುಗಳನ್ನು ಹೆಚ್ಚು ಮಾಡುವ ಬಗ್ಗೆ ಇಲ್ಲ. ಪ್ರಯತ್ನ ಮಾಡುತ್ತಿದ್ದೇವೆ. ಇದರ ಜೊತೆಗೆ ಪ್ರೈವೇಟ್‌ನವರಿಗೆ ಕೊಡುವ ಬಗ್ಗೆ ವಿಚಾರ ಮಾಡುತ್ತಿದ್ದೇವೆ.

ಶ್ರೀ ಎ.ಕೆ. ಅನಂತ ಕೃಷ್ಣ : ಈಗ ಟ್ರಾಫಿಕ್ ವೀಕ್ ಅಂತ ಹೇಳಿ....

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ಬಹಳ ಪ್ರಾಮುಖ್ಯವಾದ ವಿಚಾರ. ಇದು ಒಂದು ಜಿಲ್ಲೆ ಅಥವಾ ನಗರಕ್ಕೆ ಸಂಬಂಧಪಟ್ಟ ಪ್ರಶ್ನೆ ಅಲ್ಲ ಮಾನ್ಯ ಸಚಿವರು ಹೊಸದಾಗಿ ಈ ಇಲಾಖೆ ಜವಾಬ್ದಾರಿಯನ್ನು ತೆಗೆದುಕೊಂಡಿದ್ದಾರೆ, ತಾವು ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೀರಿ ಎನ್ನುವ ವಿಶ್ವಾಸ ನನ್ನಲ್ಲಿದೆ. ನಾನು ಈ ಸಂದರ್ಭದಲ್ಲಿ ಪ್ರಶ್ನೆ ಕೇಳುವುದು ಏನೆಂದರೆ, ಈಗ ಹೊಸದಾಗಿ ಅಡಿಷನಲ್ ಬಸ್ಸುಗಳನ್ನು ಕೊಟ್ಟು ಟಾಪ್ ಮೇಲೆ ಪಕ್ಕದಲ್ಲಿ ಹೋಗತಕ್ಕ ಟ್ರಾಫಿಕ್ ಅನ್ನು ಕಡಿಮೆ ಮಾಡುವುದಕ್ಕೆ ಏನು ಕ್ರಮ ಕೈಗೊಂಡಿದ್ದೀರಿ? ಕಳೆದ ಮೂರು ವರ್ಷಗಳಲ್ಲಿ ನಿಮ್ಮ ಸರ್ಕಾರ ಬಂದ ಮೇಲೆ ಯಾವ ರೂಟ್‌ಗಳು ಕ್ಯಾನ್ಸೆಲ್ ಮಾಡಿದ್ದೀರಿ. ಆ ರೂಟ್‌ಗಳನ್ನು ಪುನರ್ ಸ್ಥಾಪನೆ ಮಾಡಿದರೆ ಇದರಲ್ಲಿ ಅರ್ಧ ಭಾಗದ ಟ್ರಾಫಿಕ್ ಬರ್ಡನ್ ಕಡಿಮೆ ಆಗುತ್ತದೆ. ಅದನ್ನು ಮಾಡಲು ಸಾಧ್ಯವೇ ಎಂಬುದನ್ನು ಹೇಳಿ.

ಶ್ರೀ ಭೀಮಣ್ಣ ಖಂಡ್ರೆ : ಅದು ಸಾಧ್ಯವಿದೆ. ನಾವು ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : 3 ತಿಂಗಳಲ್ಲಿ, 6 ತಿಂಗಳಲ್ಲಿ ಅಥವಾ ಒಂದು ವರ್ಷದಲ್ಲಿ ಮಾಡುತ್ತೀರಿ ಎಂಬುದನ್ನು ಹೇಳಿ?

ಶ್ರೀ ಭೀಮಣ್ಣ ಖಂಡ್ರೆ : ಎಷ್ಟು ಸಾಧ್ಯವೊ ಅಷ್ಟು ಬೇಗ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನ್ನ ರಿಕ್ವೆಸ್ಟ್ ಏನೆಂದರೆ ನಿಮ್ಮ ಕನ್ನಡ ನಮಗೆ ಸರಿಯಾಗಿ ಅರ್ಥ ಆಗುವುದಿಲ್ಲ? ದಯವಿಟ್ಟು ಸ್ವಲ್ಪ ನಿಧಾನವಾಗಿ ಮಾತನಾಡಿ.

ಗುಲ್ಬರ್ಗಾ ವಿಭಾಗದ ಕ.ರಾ.ರ.ಸಾ. ಸಂಸ್ಥೆಯಲ್ಲಿ ನಷ್ಟ

291 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಗುಲ್ಬರ್ಗಾ ವಿಭಾಗದ ಬಸ್ಸುಗಳು ನಡೆಸುವುದರಲ್ಲಿ 1991-92ನೇ ಸಾಲಿನಲ್ಲಿ ಬಂದಿರುವ ಲಾಭ ಅಥವಾ ನಷ್ಟವೆಷ್ಟು ?

ಆ) ಬಸ್ಸುಗಳಲ್ಲಿ ಪ್ರಯಾಣಿಕರು ಒಳಗೆ ತುಂಬುವುದಲ್ಲದೇ ಛಾವಣಿಯ ಮೇಲೆ ಸಹ ಕುಳಿತು ಪ್ರಯಾಣ ಮಾಡಿದರೂ ಸಹ ನಷ್ಟ ಉಂಟಾಗಲು ಕಾರಣವೇನು ?

ಇ) ದಿನಾಂಕ 25-2-91ರಂದು ಬಸ್ ಸಂಖ್ಯೆ 1042 ನಿರ್ವಾಹಕರ ಸಂಖ್ಯೆ 2033, ಚಾಲಕ ಸಂಖ್ಯೆ 28882 ಇದ್ದು ಗುಲ್ಬರ್ಗಾದಿಂದ ಗುರುಮಿಟಕಲ್‌ಗೆ ಹೋಗುತ್ತಿದ್ದ ಪ್ರಯಾಣಿಕರ ಬಸ್ಸಿನ ಲಿಂದಿನ ಆದಾಯವೆಷ್ಟು ?

ಈ) ಪರಿವೀಕ್ಷಕರು, ಬಸ್ಸುಗಳು ಮಾರ್ಗಗಳಿಗನುಗುಣವಾಗಿ ಇಲ್ಲದಿರುವುದು ನಿಜವೆ ?

ಉ) ಈ ಬಸ್ಸುಗಳ ತಪಾಸಣೆ ಮಾಡಲು ಸರಿಯಾಗಿ ವ್ಯವಸ್ಥೆ ಮಾಡಿ ತಪ್ಪಿತಸ್ಥ ನಿರ್ವಾಹಕರಿಗೆ ಶಿಕ್ಷೆ ನೀಡಿ ವ್ಯವಸ್ಥೆ ಯಾವಾಗ ಸರಿಪಡಿಸಲಾಗುವುದು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) 4.90 ಕೋಟಿ ರೂಪಾಯಿಗಳು ನಷ್ಟವುಂಟಾಯಿತು.

ಆ) ಬಸ್ಸುಗಳಲ್ಲಿ ಪ್ರಯಾಣಿಕರ ಒತ್ತಡ ಹೆಚ್ಚಾಗಿ ಕಂಡುಬರುವುದು ಬೇಡಿಕೆ ಕಾಲದಲ್ಲಿ (ಪೀಕ್ ಅವರ್) ಮತ್ತು ಬಜಾರ (ಸಂತೆಯ) ದಿವಸಗಳಲ್ಲಿ ಮಾತ್ರ. ವಿದ್ಯಾರ್ಥಿಗಳೂ ಸಹ ಪಾಸುಗಳಲ್ಲಿ ಪ್ರಯಾಣ ಮಾಡುತ್ತಾರೆ. ಹೆಚ್ಚಿನ ಸಂಖ್ಯೆಯ ಪದಗೆಟ್ಟ ರಸ್ತೆಗಳಿಂದಾಗಿ ಗುಲ್ಬರ್ಗಾ ವಿಭಾಗದ ಕಾರ್ಯಚರಣೆ ವೆಚ್ಚ ತುಂಬಾ ಹೆಚ್ಚು.

ಇ) 797 ರೂಪಾಯಿಗಳು.

ಈ) ಹೌದು.

ಉ) ಸಂಚಾರ ನಿರೀಕ್ಷಕ ಮತ್ತು ಸಹಾಯಕ ಸಂಚಾರ ನಿರೀಕ್ಷಕರ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಹಣ ಕದಿಯುವ ಪ್ರಕರಣದಲ್ಲಿ ಭಾಗಿಯಾದ ನಿರ್ವಾಹಕರನ್ನು ಶಿಕ್ಷೆಗೆ ಒಳಪಡಿಸಲಾಗುತ್ತಿದೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಮಾನ್ಯ ಸಭಾಧ್ಯಕ್ಷಣೆಯವರೇ, ಅ ಪ್ರಶ್ನೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಬಸ್ಸುಗಳು ನಡೆಸುವುದಲ್ಲಿ 1990-92ನೇ ಸಾಲಿನಲ್ಲಿ ಬಂದಿರುವ ಲಾಭ ಅಥವಾ ನಷ್ಟ ಎಷ್ಟು ಎಂದು ಕೇಳಿದ್ದಕ್ಕೆ...

ಉಪಾಧ್ಯಕ್ಷರು : ನೀವು ಪ್ರಶ್ನೆಯನ್ನು ಓದುವುದು ಬೇಡ. ಪ್ರಶ್ನೆಯನ್ನು ಹಾಕಿ ?

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : ಉತ್ತರದಲ್ಲಿ 4.90 ಕೋಟಿ ರೂಪಾಯಿಗಳ ನಷ್ಟವನ್ನು ತೋರಿಸಿದ್ದಾರೆ. "ಅ" ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಬಸ್ಸುಗಳ ಒಳಗೆ ತುಂಬಿ ಹೆಚ್ಚಾದ ಪ್ರಯಾಣಿಕರು ಬಸ್ಸಿನ ಮೇಲೆ ಕುಳಿತಿರುವುದನ್ನು ತಾವು ಒಪ್ಪಿಯೂ ಸಹ ಈ ನಷ್ಟವನ್ನು ತೋರಿಸಿರುವುದು ಏಕೆ ?

ಶ್ರೀ ಭೀಮಣ್ಣ ಖಂಡ್ರೆ : ಜನ ಬಸ್ಸುಗಳ ಮೇಲೆ ಕುಳಿತುಕೊಳ್ಳುವ ಪ್ರಶ್ನೆಯೇ ಇಲ್ಲಿ ಬರುವುದಿಲ್ಲ. ಸಮ್ಮಿಲ್ಲಿ ಹೋದ ಸಾರಿ ಲಾಸ್ ಆಗುವುದಕ್ಕೆ ಬಸ್ಸುಗಳ ಕ್ಯಾನ್ಸಲೇಷನ್ ಹೆಚ್ಚಾಗಿದ್ದೆ ಕಾರಣ. ಬಸ್ಸುಗಳು ಇಲ್ಲದ ಕಾರಣ, ಡ್ರೈವರ್‌ಗಳು ಸಮಯಕ್ಕೆ ಸರಿಯಾಗಿ ಬಾರದ ಕಾರಣ, ಕ್ಯಾನ್ಸಲೇಷನ್ ಆಗಿದೆ. ಆ ಕ್ಯಾನ್ಸಲೇಷನ್‌ಗಳನ್ನು ದೂರ ಮಾಡಿ ಅದನ್ನು ಸರಿಮಾಡುತ್ತೇವೆ. ಅದರ ಜೊತೆಗೆ ಬಸ್‌ಗಳನ್ನು ಹೆಚ್ಚು ಮಾಡುತ್ತೇವೆ ಎಂದು ತಮಗೆ ಆಶ್ವಾಸನೆ ಕೊಡುತ್ತೇವೆ.

ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ : "ಇ" ಪ್ರಶ್ನೆಯಲ್ಲಿ ದಿನಾಂಕ 25-2-91ರಂದು ಬಸ್ ಸಂಖ್ಯೆ 1042 ನಿರ್ವಾಹಕರ ಸಂಖ್ಯೆ 2033, ಚಾಲಕ ಸಂಖ್ಯೆ 28882ಇದ್ದು ಗುಲ್ಬರ್ಗಾದಿಂದ ಗುರುಮಿಟಕಲ್‌ಗೆ ಹೋಗುತ್ತಿದ್ದ ಪ್ರಯಾಣಿಕರ ಬಸ್ಸಿನ ಅಂದಿನ ಆದಾಯ ಎಷ್ಟು ಎಂದು ಕೇಳಿದರೆ ಅದಕ್ಕೆ 797 ರೂಪಾಯಿಗಳು ಎಂದು ಉತ್ತರ ಕೊಟ್ಟಿದ್ದಾರೆ. ಆ ದಿವಸ ನಾನು ಸ್ವತಃ ಹೋಗಿದ್ದಾಗ ಆ ಬಸ್ಸಿನ ಮೇಲೆ ಮತ್ತು ಬಸ್ಸಿನ ಒಳಗೆ ಒತ್ತಡವಿದ್ದು ಪ್ರಯಾಣಿಕರು ಕನಿಷ್ಟ 100 ಮಂದಿ ಇದ್ದರು. ಅವರು ಒಪ್ಪಿದಂತೆ ಗುಲ್ಬರ್ಗಾದಿಂದ ಗುರುಮಿಟಕಲ್‌ವರೆಗೆ ಇದೇ ಪ್ರಕಾರ ಒತ್ತಡವಿರುತ್ತದೆ. ಆ ವೇಳೆಯಲ್ಲಿ ಗುಲ್ಬರ್ಗಾದಿಂದ ಗುರುಮಿಟಕಲ್‌ವರೆಗೆ ಕನಿಷ್ಟ 15-16 ರೂಪಾಯಿ ಚಾರ್ಜ್ ಇತ್ತು. ಆ ಪ್ರಕಾರ ಅವತ್ತಿನ ಬಸ್ಸಿನ ಆದಾಯ 1,500 ರೂಪಾಯಿಗಳು ಆಗುವುದಿಲ್ಲವೇ? ಒಂದು ವೇಳೆ 1,500 ರೂಪಾಯಿಗಳಾದರೆ ಅದರ ಅರ್ಧ ಆದಾಯ ನಿರ್ವಾಹಕರ ಜೇಬಿಗೆ ಇಳಿದಿಲ್ಲವೇ?

ಶ್ರೀ ಭೀಮಣ್ಣ ಖಂಡ್ರೆ : ಎಲ್ಲೆಲ್ಲಿ ಈ ಪ್ರಕಾರ ಸೋರಿ ಹೋಗುತ್ತಿದೆ ಅದರ ಬಗ್ಗೆ ಆಕ್ಷನ್ ತೆಗೆದುಕೊಳ್ಳುತ್ತಿದ್ದೇವೆ. ತಾವು ಏನು ಹೇಳಿದಿರಿ ಆ ಪ್ರಕಾರ ಒಬ್ಬ ಕಂಡಕ್ಟರನ್ನು ಡಿಸ್‌ಮಿಸ್ ಮಾಡಲಾಗಿದೆ. ಪಿಲ್‌ಫರೇಜ್ ಆಗುತ್ತದೆ ಅದನ್ನು ನಾನು ಒಪ್ಪುತ್ತಿದ್ದೇನೆ. ಅದಕ್ಕೆ ಹೆಚ್ಚು ಸೂಪರ್‌ವಿಷನ್ ಬೇಕು. ಅದು ಇಲ್ಲದ ಕಾರಣ ಪಲ್‌ಫರೇಜ್ ಆಗುತ್ತಿದೆ. ಲಾಸ್ ಕಡಿಮೆ ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಅದರ ಬಗ್ಗೆ ಸಾಧ್ಯವಾದಷ್ಟು ಕಾರ್ಯಕ್ರಮವನ್ನು ತೆಗೆದುಕೊಂಡು ಇದನ್ನು ದೂರ ಮಾಡುವ ಪ್ರಯತ್ನ ಮಾಡುತ್ತೇವೆಂದು ತಮಗೆ ಆಶ್ವಾಸನೆ ಕೊಡುತ್ತಿದ್ದೇವೆ. ಮತ್ತು ಎಲ್ಲೆಲ್ಲಿ ಬಸ್ಸುಗಳು ಕಡಿಮೆ ಇವೆ ಈ ಬಗ್ಗೆ ಪ್ರಶ್ನೆ ಬಂದಿತ್ತು. ನಾನು ಈಗ ಹೇಳಿದ್ದೇನೆ. We will provide buses to those places.

ಭದ್ರಾವತಿ ನಗರಕ್ಕೆ ಸಕ್ಕರೆ ಮತ್ತು ಸೀಮೆಎಣ್ಣೆ ವಿತರಣೆ

841 - ಶ್ರೀ ಕರಿಯಣ್ಣ (ಹೊಳೆಹೊನ್ನೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಭದ್ರಾವತಿ ನಗರಕ್ಕೆ ಪ್ರತಿ ತಿಂಗಳು ಸರಬರಾಜು ಮಾಡುತ್ತಿರುವ ಸೀಮೆಎಣ್ಣೆ ಮತ್ತು ಸಕ್ಕರೆಯ ಪ್ರಮಾಣವೆಷ್ಟು?

ಆ) ಭದ್ರಾವತಿ ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ ಪ್ರತಿ ತಿಂಗಳು ಸರಬರಾಜು ಮಾಡುತ್ತಿರುವ ಸೀಮೆಎಣ್ಣೆ ಮತ್ತು ಸಕ್ಕರೆಯ ಪ್ರಮಾಣವೆಷ್ಟು?